**<u>ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಟಿ.ಎಸ್ ವಕೀಲರ ಪರವಾಗಿ ಶ್ರೀ ಎ.ಎಸ್ ವಕೀಲರಿಂದಃ-</u>**

ವಾದ ಪತ್ರಗಳಲ್ಲಿ ಇರುವ ಅಂಶಗಳನ್ನು ನಾನೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಇರುವ ವಿಷಯಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಪಟೇಲ್ ಸಿದ್ದನಾಯಕ ರವರಿಗೆ 4 ಜನ ಮಕ್ಕಳು. ಅವರುಗಳೆಂದರೆ ಬೆಟ್ಟನಾಯಕ, ಜವರನಾಯಕ, ಕರೀನಾಯಕ ಮತ್ತು ತಮ್ಮಣ್ಣಯ್ಯ. ಬೆಟ್ಟನಾಯಕ ರವರು ಮೊದಲನೇ ಮಗ ಎಂದರೆ ಸರಿ. ಅವರು 1990 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ 1986-87 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ ಎನ್ನುತ್ತಾರೆ, ಬೆಟ್ಟನಾಯಕ ರವರ ಹೆಂಡತಿ ಚಿಕ್ಕದೇಮ್ಮ. 2 ರಿಂದ 8 ನೇ ವಾದಿಗಳು ಬೆಟ್ಟನಾಯಕ ರವರ ಮಕ್ಕಳು ಎಂದರೆ ಸರಿ. ಪಟೇಲ್ ಸಿದ್ದನಾಯಕ 2 ನೇ ಮಗ ಜವರನಾಯಕ ರವರು 1987 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಹೆಂಡತಿ ಸಿದ್ದಮ್ಮ 9 ನೇ ವಾದಿ ಎಂದರೆ ಸರಿ.

ಪಟೇಲ್ ಸಿದ್ದನಾಯಕ ರವರ 3 ನೇ ಮಗ ಕರೀನಾಯಕ 1983 ರಲ್ಲಿ ಮರಣ ಹೊಂದಿರತ್ತಾರೆ. ಅವರ ಹೆಂಡತಿ ಚಿಕ್ಕತಾಯಮ್ಮ, ಅವರ ಮಕ್ಕಳು ಧರ್ಮರಾಜು, ಕುಮಾರ್, ಜಯರಾಮನಾಯಕ. ಅವರು ಕ್ರಮವಾಗಿ 19 ನೇ ವಾದಿ, 7 ನೇ ಪ್ರತಿವಾದಿ ಮತ್ತು 20 ವಾದಿ ಆಗಿರುತ್ತಾರೆ ಎಂದರೆ ಸರಿ. ಪಟೇಲ್ ಸಿದ್ದನಾಯಕ ರವರ ಮರಣದ ನಂತರ ಮೂರು ಮಕ್ಕಳು ತೀರಿಕೊಂಡ ನಂತರ 4 ನೇ ಮಗ ತಮ್ಮಣ್ಣಯ್ಯ ಮತ್ತು ತೀರಿಕೊಂಡವರ ಹೆಂಡತಿ, ಮಕ್ಕಳ ನಡುವೆ ವಿಭಾಗ ಆಗಿದೆ ಎಂದರೆ ಸರಿಯಲ್ಲ. ಎಂ.ಆರ್ ನಂ. 4/1992-93 ರೀತ್ಯಾ ವಿಭಾಗ ಮಾಡಿಕೊಂಡ ನಂತರ ಮ್ಯೂಟೇಶನ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮ್ಯೂಟೇಶನ್ ಆಧಾರದ ಮೇಲೆ ಖಾತೆ ವೈಗೈರೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಅವರವರ ಹೆಸರಿನಲ್ಲಿ

ಆರ್.ಟಿ.ಸಿ ಸಹ ಇದೆ ಎಂದರೆ ಸರಿಯಲ್ಲ. ಆರ್.ಟಿ.ಸಿಯ ಸ್ವಾಧೀನ ಕಾಲಂ ನಲ್ಲಿ ಅವರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನಮ್ಮ ಚಿಕ್ಕಪ್ಪ ಆ ರೀತಿ ಮಾಡಿರಬಹುದು ಎನ್ನುತ್ತಾರೆ. ಅವರವರ ಹೆಸರಿಗೆ ಬಂದಂತಹ ಭಾಗಾಂಶದ ಮೇಲೆ ಸದರಿ ರವರು ಲೋನ್ ಸಹ ಪಡೆಸಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.